ಶ್ರೀ ವಿಶ್ವನಾಥ ರೆಡ್ಡಿ.—ಸರ್ಕಾರ ವಿಚಾರ ಮಾಡುತ್ತದೆ.

ಒಬ್ಬ ಸದಸ್ಯರು.—ಈ ಇಲಾಖೆಯಲ್ಲಿ ನಾಲ್ಕನೇ ದರ್ಜೆ ನೌಕರರನ್ನು ಯಾವ ಆಧಾರದ ಮೇಲೆ ನೇಮಿಸಿದ್ದೀರಿ. ಇವರಿಗೆ ಸಂಬಳ ಕೊಡುತ್ತಿದ್ದಾರೋ ಅಥವಾ ಬೇರೆ ರೀತಿಯಲ್ಲಿ ಸಂಭಾವನೆ ಕೊಡುತ್ತಿದ್ದಾರೋ ? ಅಮೃತ್‌ಮಹಲ್‌ಗೆ ಸೇರಿರತಕ್ಕ ಜಮೀನಿಗೆ ಬೇರೆಯವರು ಬರಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದು ಏತಕ್ಕೆ ? ಅವರಿಗೆ ಸರ್ಕಾರದ ಅನುಮತಿ ದೊರಕಿದೆಯೇ ? ಆ ಜಮೀನಿಗೆ ಯಾವ ಆಧಾರದ ಮೇಲೆ ಮಂಜೂರಾತಿ ಕೊಟ್ಟಿದ್ದೀರಾ ? ೧೯೭೮ರಲ್ಲಿ ಳಳಿಜ ಕರುಗಳು ಹುಟ್ಟಿವೆ ಅದರಲ್ಲಿ ೬೩ ಸಾವಾಗಿದೆ, ಇದಕ್ಕೆ ಕಾರಣ ಏನು ?

ಶ್ರೀ ವಿಶ್ವನಾಥ ರೆಡ್ಡಿ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಶ್ನೆಗಳನ್ನು ಕೇಳಿದ್ದಾರೆ ಅದಂ ಈ ಪ್ರಶ್ನೆಯಲ್ಲಿ ಉದ್ಭವವಾಗುವುದಿಲ್ಲ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಒಬ್ಬ ಸದಸ್ಯರು.—ಅಮೃತ್‌ಮಹಲ್ ಕಾವಲ್‌ನಲ್ಲಿ ಅಕ್ರಮ ಸಾಗುವಳಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಿಶ್ವನಾಥ ರೆಡ್ಡಿ.—ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಏನಂ ಕ್ರಮ ತೆಗೆದು ಕೊಳ್ಳಬೇಕೋ ಅದನ್ನು ಸರ್ಕಾರ ವಿಚಾರ ಮಾಡುತ್ತಿದೆ.

ಒಬ್ಬ ಸದಸ್ಯರು.—ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ವಿಶ್ವನಾಥ ರೆಡ್ಡಿ.—ಸರ್ಕಾರ ವಿಚಾರ ಮಾಡುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಇಲಾಖೆ ಮಾಡಿದ ಅನ್ಯಾಯವನ್ನು ಇನ್ನೊಂದಂ ಇಲಾಖೆ ಸರಿಪಡಿಸುವುದಕ್ಕೆ ಆಗುವುದಿಲ್ಲವೇ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಡ ಬೇಕು.

ಶ್ರೀ ಮಲ್ಲಪ್ಪ.—ಗೋಮಾಳಗಳನ್ನು ಜಮೀನು ಇಲ್ಲದವರಿಗೆ ವಿತರಣೆ ಮಾಡಿರುವುದರಿಂದ ಅಲ್ಲಿ ದನಕರುಗಳಿಗೆ ಮೇಯಲಿಕ್ಕೆ ತೊಂದರೆಯಾಗಿದೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡು ದನಕರುಗಳು ಮೇಯಲಿಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ವಿಶ್ವನಾಥ ರೆಡ್ಡಿ.—ಅಧ್ಯಕ್ಷರೆ, ಮಾನ್ಯ ಕೃಷ್ಣನ್ ಅವರು ಕೇಳಿದ ಪ್ರಶ್ನೆಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಒಂದು ಡಿಪಾರ್ಟ್‌ಮೆಂಟ್‌ನವರು ಕೊಟ್ಟಿರುವುದನ್ನು ಇನ್ನೊಂದು ಡಿಪಾರ್ಟ್‌ಮೆಂಟಿನವರು ಕಸಿದುಕೊಳ್ಳುವುದಕ್ಕೆ ಬರುವುದಿಲ್ಲ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆ. ಇನ್ನು ಮಾನ್ಯ ಮಲ್ಲಪ್ಪನವರ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ. ಅವರು ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಬಿ. ನಂಜಪ್ಪ.—ರೆವಿನ್ಯೂ ಇಲಾಖೆಯವರು ಈ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿರುವವರಿಗೆ ಕೊಟ್ಟಿರುವುದು ಎಲ್ಲರಿಗೂ ಗೊತ್ತಿದೆ. ತಮಗೆ ಅದನ್ನು ವಾಪಸ್ಸು ತೆಗೆದು ಕೊಳ್ಳುವುದಕ್ಕೆ ಶಕ್ತಿ ಇಲ್ಲವೇ ? ಇಲ್ಲ ಹಾಗೆ ಅವರನ್ನು ಕನ್‌ಫರಮ್ ಮಾಡುತ್ತಿರಾ ? ದಯವಿಟ್ಟು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ತಿಳಿಸಬೇಕಂ.

ಶ್ರೀ ವಿಶ್ವನಾಥ ರೆಡ್ಡಿ.—ಇದರ ಬಗ್ಗೆ ಪ್ರತ್ಯೇಕವಾದ ವಿಧೇಯಕ ತರಬೇಕೆಂದು ಸರ್ಕಾರ ಪರಿಶೀಲಿಸುತ್ತಿದೆ. ಅದು ಬಂದಮೇಲೆ ಸರಿಯಾಗಬಹುದು.

ರಾಜಾಜಿನಗರದಲ್ಲಿ ಪಶುವೈದ್ಯ ಶಾಲೆಯನ್ನು ತೆರೆಯುವ ಬಗ್ಗೆ.

೨೧೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಪಶುಸಂಗೋಪನ, ಪಶುವೈದ್ಯ ಸೇವೆ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಹಾಲು ಕೊಡತಕ್ಕಂತ ಹಸು, ಮತ್ತು ಎಮ್ಮೆಗಳ ಸಂಖ್ಯೆಯನ್ನು ಗಣತಿ ಮಾಡಲಾಗಿದೆಯೇ ?

ಅ) ರಾಜಾಜಿನಗರದ ವಿಧಾನಸಭಾ ಕ್ಷೇತ್ರದಲ್ಲಿರುವ ಹೈಸುಗಾರಿಕೆ ಹೊಂದಿರುವ ಹೆಚ್ಚಿನ ಜನರಿಗೆ ಪಶುವೈದ್ಯ ಶಾಲೆಯ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದ್ದೆಯೇ?

ಆ) ಸರಕಾರ ಪಶುವೈದ್ಯ ಶಾಲೆಯನ್ನು ಕಟ್ಟಲು ಪರಿಶೀಲಿಸುವುದೇ ?

ಶ್ರೀ ವಿಶ್ವನಾಥ ರೆಡ್ಡಿ (ಪಶುಸಂಗೋಪನಾ, ಪಶುವೈದ್ಯ ಸೇವೆ ಹಾಗೂ ತೋಟಗಾರಿಕೆ ಮಂತ್ರಿಗಳು).—

ಅ) ಹೌದು. ಹಸುಗಳು ೨೭,೦೬೩, ಎಮ್ಮೆಗಳು ೧೮,೦೫೪, ಹಾಲಿನ ಉತ್ಪಾದನೆ ಟನ್ನುಗಳಲ್ಲಿ ಹಸುಗಳಿಂದ ೬೪,೫೨೧, ಎಮ್ಮೆಗಳಿಂದ ೬,೪೪೯.

ಆ) ಬಂದಿದೆ.

ಇ) ಬೇಕಾದ ಸೌಲಭ್ಯಗಳನ್ನು ಒದಗಿಸುವ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಈ ತರಹ ಸಮೀಕ್ಷೆ ನಡೆಸಿದ್ದೀರಿ. ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ಪ್ರದೇಶದಲ್ಲಿ ಹಸುಗಳು ಎಮ್ಮೆಗಳು ಎಷ್ಟೆಷ್ಟು ಇವೆ ಎಂದು ತಿಳಿಸುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.—ಸದ್ಯಕ್ಕೆ ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಆಸ್ಪತ್ರೆ ತೆರೆಯಬೇಕಾದರೆ ಇಷ್ಟೇ ಹಸುಗಳು ಇರಬೇಕು, ಇಷ್ಟೇ ಎಮ್ಮೆಗಳು ಇರಬೇಕು ಎಂಬ ಒಂದು ವಿಧಿನಿಯಮವು ಏನಾದರೂ ಇದೆಯೇ ? ನಾರಮ್ಸ್ ಏನಾದರೂ ಇದ್ದರೆ ಹೇಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.—ನಾರಮ್ಸ್ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಈಗಾಗಲೇ ಮಾನ್ಯ ಕೃಷ್ಣನ್ ಅವರು ರಾಜಾಜಿನಗರಕ್ಕೆ ಪಶುವೈದ್ಯಶಾಲೆ ಬೇಕೆಂದು ಕೇಳಿದ್ದಾರೆ, ಅದರ ಬಗ್ಗೆ ಪರಿಶೀಲನೆ ಮಾಡೋಣ ಎಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ಬೆಂಗಳೂರು ನಗರದ ಮಧ್ಯದಲ್ಲಿ ಹಸು-ಎಮ್ಮೆಗಳನ್ನು ಸಾಕುವುದರಿಂದ ನಗರದ ನೈರ್ಮಲ್ಯ ಕೆಡುತ್ತದೆ. ಅದುದರಿಂದ ಬೆಂಗಳೂರು ನಗರದಲ್ಲಿರತಕ್ಕ ಹಸು, ಎಮ್ಮೆಗಳನ್ನು ಬೇರೆ ಕಡೆಗೆ ಸಾಗಿಸಿ, ನಗರ ನೈರ್ಮಲ್ಯ ಕೆಡದಂತೆ ನೋಡಿಕೊಳ್ಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.—ಅದು ಸರ್ಕಾರದ ಗಮನದಲ್ಲಿಲ್ಲ. ಮಾನ್ಯ ಕೃಷ್ಣನ್ ಅವರಿಗೆ ಹೇಳಬೇಕೆಂದರೆ ೧೦ ಸಾವಿರ ದನಗಳು ಇದ್ದರೆ ಒಂದು ಪಶುವೈದ್ಯಶಾಲೆ ತೆಗೆಯುವಂಥಾದ್ದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಾಜಿನಗರ, ಮಲ್ಲೇಶ್ವರ, ಯಶವಂತಪುರ, ಈ ಎಲ್ಲಾ ಪ್ರದೇಶಗಳನ್ನು ಸೇರಿಸಿ ಒಂದು ಸಣ್ಣ ಆಸ್ಪತ್ರೆ ಮಲ್ಲೇಶ್ವರದಲ್ಲಿದೆ. ಅದನ್ನು ಅಪ್‌ಗ್ರೇಡ್ ಮಾಡಿ, ಮತ್ತೆ ರಾಜಾಜಿನಗರದಲ್ಲಿ ಒಂದು ಪಶುವೈದ್ಯಶಾಲೆ ಕಟ್ಟಲಿಕ್ಕೆ ಪರಿಶೀಲಿಸುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.— ಪರಿಶೀಲಿಸೋಣ.

ಶ್ರೀ ಎಂ.ಎಸ್. ಕೃಷ್ಣನ್.—ಪರಿಶೀಲಿಸೋಣ ಅಂದರೆ ಸರಿಯಾದ ಉತ್ತರ ಆಗುವುದಿಲ್ಲ. ಇಷ್ಟು ದಿವಸ ಬೇಕಾಗುತ್ತದೆ ಎಂದು ಹೇಳಿದರೆ ಸ್ಯಾಟಿಸ್‌ಫೈ ಆಗಬಹುದು.

ಶ್ರೀ ವಿಶ್ವನಾಥರೆಡ್ಡಿ.— ಪರಿಶೀಲನೆ ಮಾಡೋಣ ಎಂದು ಹೇಳಿದ್ದೇನೆ. ಅವಶ್ಯಕವಾಗಿ ಸಹಾನುಭೂತಿಯಿಂದ ವಿಚಾರ ಮಾಡುತ್ತೇನೆ ; ಮಾಡೋಣ.

ಒಬ್ಬ ಸದಸ್ಯರು.—ಇಡೀ ರಾಜ್ಯದಲ್ಲಿ ಪಶುವೈದ್ಯಶಾಲೆಗಳ ಅಭಾವ ಇದೆ. ಆದ್ದರಿಂದ, ಗ್ರಾಮಾಂತರ ಪ್ರದೇಶಗಳಿಗೆ ಪಶುವೈದ್ಯಶಾಲೆಗಳನ್ನು ಕೊಡಲಿಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ವಿಶ್ವನಾಥರೆಡ್ಡಿ.—ಈಗಾಗಲೇ ತಮಗೆ ವಿವರಣೆ ಕೊಟ್ಟಿದ್ದೇನೆ, ೭೭೨ ಸ್ಯಾಕ್‌ಮೆನ್, ೭೨೦ ಕಾಂಪೌಂಡರ್ಸ್, ೧೭೦ ಜನ ಡಾಕ್ಟರುಗಳ ಕೊರತೆ ಇದೆ ಎಂದು ಹಿಂದೆಯೇ ಈ ಸದನಕ್ಕೆ ತಿಳಿಸಿದ್ದೇನೆ. ಆ ಕೊರತೆಗಳನ್ನು ಹೇಗೆ ತುಂಬಬೇಕು, ಎನ್ನುವುದರ ಬಗ್ಗೆ ಆಲೋಚನೆ ಮಾಡಿ ಒಮ್ಮು ವಿಸ್ತೃತ ಯೋಜನೆ ಮಾಡಿ ಆಲೋಚನೆ ಮಾಡಬೇಕಾಗುತ್ತದೆ. ಆವರ ಬಗ್ಗೆ ಆಲೋಚಿಸುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಕೆಲವು ಆಸ್ಪತ್ರೆಗಳನ್ನು ಮಂಜೂರು ಮಾಡಿದ್ದರು. ಆದರೆ ಅವುಗಳನ್ನು ಈಗ ತಡೆಹಿಡಿದಿದ್ದೀರಂತೆ. ಅದನ್ನು ಮತ್ತೆ ಮಂಜೂರು ಮಾಡಿಕೊಡುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.—ಈ ಪ್ರಶ್ನೆಗೆ ನಾನು ಈ ಮೊದಲೇ ಉತ್ತರವನ್ನು ಕೊಟ್ಟಿದ್ದೇನೆ. ಆ ಆಜ್ಞೆಯನ್ನು ತಡೆಹಿಡಿದಿಲ್ಲ. ಹಿಂದೆ ಯಾವ ಸಿಬ್ಬಂದಿಯೂ ಇಲ್ಲದೆ ಕೇವಲ ಆಸ್ಪತ್ರೆಗಳನ್ನು ಮಾತ್ರ ಕೊಟ್ಟಿದ್ದರು. ಆದರೆ ಇನ್ನು ಮುಂದೆ ಈ ರೀತಿ ಸಿಬ್ಬಂದಿ ಇಲ್ಲದ ಆಸ್ಪತ್ರೆಗಳನ್ನು ಕೊಡುವುದು ಬೇಡವೆಂದು ಮಾಡಿದ್ದೇವೆ. ನಾವು ಎಲ್ಲೆಲ್ಲಿ ಆಸ್ಪತ್ರೆಗಳನ್ನು ತೆರೆಯಬೇಕೆಂದು ಮಾಡಿದ್ದೇವೆ ಅಲ್ಲಿ ಕನಿಷ್ಟ ಒಬ್ಬ ವೈದ್ಯನಾದರೂ ಇರಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ೧೦ ಸಾವಿರ ದನಗಳಿದ್ದರೆ ಒಂದು ದನಗಳ ಆಸ್ಪತ್ರೆಯನ್ನು ಕೊಡುವ ನಿಯಮ ಇದೆಯೆಂದು ತಾವು ಹೇಳಿದ್ದೀರಿ. ಆದರೆ ೫ ಸಾವಿರ ಪಶುಗಳು ಇರತಕ್ಕ ಚನ್ನರಾಯಪಟ್ಟಣಕ್ಕೆ ಒಂದು ಆಸ್ಪತ್ರೆಯನ್ನು ತಾವು ಕೊಟ್ಟಿದ್ದೀರಿ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿಶ್ವನಾಥ ರೆಡ್ಡಿ.—ನಮ್ಮ ನಾರ್ಮ್ಸ್ ಪ್ರಕಾರ ೧೦ ಸಾವಿರ ಪಶುಗಳಿದ್ದರೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದಿದೆ. ಆದರೆ ೧೦ ಸಾವಿರಕ್ಕಿಂತ ಕಡಿಮೆ ಪಶುಗಳು ಇದ್ದರೆ ಆಸ್ಪತ್ರೆಯನ್ನು ಕೊಡಬಾರದೆಂದು ಏನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಒಂದು ಹಳ್ಳಿಯಲ್ಲಿ ೫ ಸಾವಿರ ಪಶುಗಳಿದ್ದರೆ ಆ ಹಳ್ಳಿಯ ಸುತ್ತಮುತ್ತಲೂ ಇರತಕ್ಕ ಹಳ್ಳಿಗಳಿಂದ ಪಶುಗಳು ಬರುತ್ತವೆಂಬ ದೃಷ್ಟಿಯಿಂದಲೂ ಕೊಟ್ಟಿರುತ್ತೇವೆ.

ಹೈದರಾಬಾದ್ ವೇತನ ಶ್ರೇಣಿಯನ್ನು ರಾಜ್ಯದ ಪ್ರಾಥಮಿಕ ಶಿಕ್ಷಕರಿಗೆ ಕೊಡುವ ಬಗ್ಗೆ

೨೯೮ ಶ್ರೀ ಕೆ. ಮಲ್ಲಪ್ಪ (ಪರಿಹರ).—ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯ ಪ್ರಾಥಮಿಕ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಯಾವ ವರ್ಷದಿಂದ ಕೊಡಲಾಗಿದೆ.

ಆ) ಹಾಗಿದ್ದಲ್ಲಿ ವೇತನ ಶ್ರೇಣಿ ಕೊಟ್ಟಿರುವ ಒಟ್ಟು ಪೊತ್ತವೆಷ್ಟು ?

ಇ) ಈವರೆಗೂ ರಾಜ್ಯ ಎಷ್ಟು ಪ್ರಾಥಮಿಕ ಶಿಕ್ಷಕರಿಗೆ ಈ ವೇತನ ಶ್ರೇಣಿಯನ್ನು ಕೊಡಲಾಗಿದೆ.

ಈ) ಇನ್ನೂ ಕೆಲವು ಶಿಕ್ಷಕರಿಗೆ ಈವರೆವಿಗೂ ಕೊಡದಿರಲು ಕಾರಣಗಳೇನು.

ಉ) ಈಗಲಾದರೂ ಉಳಿದ ಶಿಕ್ಷಕರಿಗೆ ಎಷ್ಟು ಕಾಲದಲ್ಲಿ ಹೈದರಾಬಾದ್ ವೇತನ ಶ್ರೇಣಿಯನ್ನು ಮಂಜೂರು ಮಾಡಲಾಗುವುದು ?

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಗಳು).—

ಅ) ೧೯೫೭ ಜನವರಿ ೧ ರಿಂದ ಪುನರ್ನಿಗದಿಪಡಿಸಿ ವೇತನವನ್ನು ನೀಡಲಾಗಿದೆ.

ಆ) ವರ್ಷಕ್ಕೆ ಸುಮಾರು ಮೂರುವರೆ ಕೋಟಿ ರೂಗಳು.

ಇ) ೪೪,೬೪೦.

ಈ) ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಕಾಲಮಿತಿಯನ್ನು ಗೊತ್ತುಪಡಿಸುವುದಕ್ಕೆ ಆಗುವುದಿಲ್ಲ.